**ಮಕ್ಕಳ ಭಿಕ್ಷಾಟನೆ ವಿರುದ್ಧ ಕೈಗೊಳ್ಳಬಹುದಾದ ಐಇಸಿ ಕಾರ್ಯಕ್ರಮಗಳ ಕುರಿತು ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ದಿನಾಂಕ: 13.12.2020 ರಂದು ಆನ್‌ಲೈನ್ ಮುಖಾಂತರ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಭಾಗವಹಿಸಿದವರು:**

- ಶ್ರೀಮತಿ ಪಲ್ಲವಿ ಆಕುರಾತಿ, ಮಾನ್ಯ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
- ಶ್ರೀ ವಾಸುದೇವಶರ್ಮ, ನಿರ್ದೇಶಕರು, ಚೈಲ್ಡ್‌ರೈಟ್ಸ್ ಟ್ರಸ್ಟ್, ಬೆಂಗಳೂರು.
- ಶ್ರೀಮತಿ ಖುಷಿ, ಎನ್‌ಫೋಲ್ಡ್, ಬೆಂಗಳೂರು.
- ಶ್ರೀಮತಿ ಸಂಗೀತಾ ಸಕ್ಸೇನಾ, ಎನ್‌ಫೋಲ್ಡ್, ಬೆಂಗಳೂರು.
- ಶ್ರೀ ಹರೀಶ್ ಜೋಗಿ, ಯೂನಿಸೆಫ್ ಕನ್ಸಲ್‌ಟೆಂಟ್, ಕೊಪ್ಪಳ
- ಶ್ರೀಮತಿ ಸುಷ್ಮಾ, ಚುಕ್ಕಿ ಟಾಕೀಸ್, ಬೆಂಗಳೂರು.
- ಶ್ರೀಮತಿ ಟಿ.ಕೆ.ಗೀತಾರಾಣಿ, ಕಾರ್ಯಕ್ರಮ ವ್ಯವಸ್ಥಾಪಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
- ಶ್ರೀಮತಿ ಕವಿತ, ಕಾರ್ಯಕ್ರಮ ಅಧಿಕಾರಿ, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು.
- ಶ್ರೀಮತಿ ಸುಮತಿ, ಬಚಪನ್ ಬಚಾವೋ ಆಂದೋಲನ, ಬೆಂಗಳೂರು.
- ಶ್ರೀಮತಿ ಸುಜ, ಎನ್‌ಫೋಲ್ಡ್, ಬೆಂಗಳೂರು.

ಮಾನ್ಯ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು. ಇವರು ಸಭೆಯಲ್ಲಿ ಭಾಗವಹಿಸಿದವರನ್ನು ಸಭೆಗೆ ಆಹ್ವಾನಿಸುವ ಮೂಲಕ ಸಭೆಯನ್ನು ಪ್ರಾರಂಭಿಸಿದರು. ಸದರಿ ಸಭೆಯಲ್ಲಿ ಮಕ್ಕಳ ಭಿಕ್ಷಾಟನೆ ವಿರುದ್ಧ ಮತ್ತು ಮಕ್ಕಳು ವಸ್ತುಗಳನ್ನು ಮಾರಾಟ ಮಾಡುವವರ ವಿರುದ್ಧ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಿದ್ಧಪಡಿಸಬಹುದಾದ ಐಇಸಿ ಸಾಮಗ್ರಿಗಳ ಕುರಿತು ಹಾಗೂ ಅರಿವು ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ಚರ್ಚಿಸಲಾಯಿತು. ಚರ್ಚಿಸಲಾದ ವಿಷಯಗಳು ಈ ಕೆಳಕಂಡಂತಿವೆ.

ಮುಖ್ಯವಾಗಿ ಮಕ್ಕಳ ಸಹಾಯವಾಣಿ–1098 ಬಗ್ಗೆ ಯಾವ ಯಾವ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರವನ್ನು ಕೈಗೊಂಡಲ್ಲಿ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ತಲುಪುವಂತೆ ಮಾಡಬಹುದು ಎಂಬುದರ ಕುರಿತು ಚರ್ಚೆಯಾದ ಅಂಶಗಳು.

- ಮುಖ ಪುಟ ಮತ್ತು ಹಿಂಪುಟಕ್ಕೆ ಮಕ್ಕಳು ಬ್ರೌನ್ ಕವರ್ ಹಾಕುವುದರಿಂದ, ಮಕ್ಕಳ ಸಹಾಯವಾಣಿ ಸಂಖ್ಯೆ–1098ನ್ನು ಮುಖ ಪುಟ ಮತ್ತು ಹಿಂಪುಟದ ಮೇಲೆ ಮುದ್ರಣ ಮಾಡಿದರೆ ವ್ಯರ್ಥವಾಗುತ್ತದೆ ಎಂದು ಎಲ್ಲರೂ ಅಭಿಪ್ರಾಯಿಸಿದರು. ಅದರಂತೆ ಒಳಪುಟಗಳ ಮುಂಪುಟ ಹಾಗೂ ಹಿಂಪುಟಗಳಲ್ಲಿ ಹಾಗೂ ಎರಡು ಬದಿಗಳಲ್ಲಿ ಹೆಚ್ಚುವರಿಯಾಗಿರುವ ಪುಟಗಳ ಮೇಲೆ

13

13

(like private note books) ಮಾದರಿಯಲ್ಲಿ ಮಕ್ಕಳ ಪಠ್ಯಪುಸ್ತಕದ ಮೊದಲ ಪುಟ ಹಾಗೂ ಕೊನೆಯ ಪುಟದಲ್ಲಿ ಮಕ್ಕಳ ಸಹಾಯವಾಣಿ–1098ನ್ನು ಹಾಕಬಹುದು.

- ಪಠ್ಯಪುಸ್ತಕದ ಪ್ರತಿ ಪುಟದ ಕೆಳಭಾಗದಲ್ಲಿ 10 ವಿಷಯಗಳಿಗೆ ಸಂಬಂಧಿಸಿದಂತೆ 10 ಲೈನ್‌ಗಳನ್ನು ಪ್ರತಿ ಪುಟಕ್ಕೆ ಒಂದು ಲೈನ್‌ನಂತೆ ಹಾಕಿ ರೊಟೇಷನ್ ರೂಪದಲ್ಲಿ ಮುದ್ರಿಸಬಹುದಾಗಿರುತ್ತದೆ. ಮಕ್ಕಳ ವಯಸ್ಸಿಗೆ ಸೂಕ್ತವಾಗುವಂತಹ ಹಾಗೂ ಉಪಯುಕ್ತವಾಗುವಂತಹ ವಿಷಯಗಳ ಬಗ್ಗೆ ಆ ತರಗತಿಗೆ ಸೂಕ್ತವಾಗುವ ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು. (ಮಕ್ಕಳ ರಕ್ಷಣೆಗೆ ಸಂಬಂಧಿಸಿದ ವಿಷಯಗಳಾದ ಬಾಲ್ಯ ವಿವಾಹದ ವಿರುದ್ಧ, ಮಕ್ಕಳ ಸಾಗಾಣಿಕೆ ವಿರುದ್ಧ, ಬಾಲ ಕಾರ್ಮಿಕತೆ ವಿರುದ್ಧ, ಮಕ್ಕಳ ಹಕ್ಕುಗಳು, 1098 ಮತ್ತು ಜಾಲತಾಣ ಸುರಕ್ಷತೆ ಹಾಗೂ ಇನ್ನಿತರೆ ವಿಷಯಗಳ ಮಾಹಿತಿಯನ್ನು ಅಳವಡಿಸುವುದು).
- ಪಠ್ಯಪುಸ್ತಕದಲ್ಲಿ ಪಠ್ಯಕ್ರಮದಲ್ಲಿ ಒಂದು ಪಾಠವಾಗಿ ಅಳವಡಿಸಲು (ಮಕ್ಕಳ ಹಕ್ಕುಗಳು, ಮಕ್ಕಳ ಭಿಕ್ಷಾಟನೆ, ಮಕ್ಕಳ ಸಹಾಯವಾಣಿ–1098) ಕೋರಿ ಪತ್ರವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲು ತೀರ್ಮಾನಿಸಲಾಯಿತು. ಅದರಂತೆ ಕರಡನ್ನು ಸಿದ್ಧಪಡಿಸಲು ಶ್ರೀಮತಿ ಸಂಗೀತಾ ಸಕ್ಸೇನಾ, ಶ್ರೀ ವಾಸುದೇವ ಶರ್ಮ, ಶ್ರೀ ಹರೀಶ್ ಜೋಗಿ ಇವರುಗಳಿಗೆ ಜವಾಬ್ದಾರಿಯನ್ನು ವಹಿಸಿಕೊಡಲಾಯಿತು.
- ಮಕ್ಕಳ ಡೈರಿಗಳಲ್ಲಿ ಹಾಗೂ ಪಠ್ಯಪುಸ್ತಕದ ಮೇಲ್ಭಾಗದಲ್ಲಿ ಅಂಟಿಸುವ ನೇಮ್‌ಲಿಸ್ಟ್‌ಗಳನ್ನು ಮಕ್ಕಳಿಗೆ ಇಷ್ಟವಾಗುವಂತೆ ಅಂದವಾಗಿ ಮುದ್ರಣಗೊಳಿಸಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ನೀಡಬಹುದಾಗಿರುತ್ತದೆ. ಸದರಿ ಕಾರ್ಯಕ್ಕೆ ತಗಲಬಹುದಾದ ವೆಚ್ಚವನ್ನು ಸಿಎಸ್‌ಆರ್ ನಿಧಿಯಡಿ ಪಡೆಯಬಹುದು.
- ಮಕ್ಕಳ ಸಹಾಯವಾಣಿ–1098 ಬಗ್ಗೆ ನೋಟ್ ಪುಸ್ತಕ ಸಿದ್ಧಪಡಿಸುವ ಖಾಸಗಿ ಕಂಪನಿಯವರೊಂದಿಗೆ ಚರ್ಚಿಸುವ ಮೂಲಕ ನೋಟ್ ಪುಸ್ತಕ ಗಳಲ್ಲಿ ಮುದ್ರಿಸಲು ಕ್ರಮ ವಹಿಸುವುದು.
- ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸಹಾಯವಾಣಿ–1098ನ್ನು ಕುರಿತು ಗೋಡೆ ಬರಹಗಳನ್ನು ಬರೆಸಬಹುದು. ಈಗಾಗಲೇ ಹಿಂದೆ ಬರೆಸಲಾಗಿರುತ್ತದೆ. ಪ್ರಸ್ತುತವಾಗಿಯೂ ಕೂಡ ಮತ್ತೊಮ್ಮೆ ಸುತ್ತೋಲೆಗಳನ್ನು ನೀಡಿ ಕ್ರಮವಹಿಸಬಹುದಾಗಿರುತ್ತದೆ.
- ಸ್ಲಂ ಪ್ರದೇಶಗಳಲ್ಲಿ ಹೆಚ್ಚಿನ ಪ್ರಚಾರದ ಅವಶ್ಯಕತೆ ಇರುತ್ತದೆ. ಸ್ಲಂ ಏರಿಯಾಗಳಲ್ಲಿ ಮಕ್ಕಳ ಸಹಾಯವಾಣಿ–1098 ಪ್ರದರ್ಶನ ಮಾಡುವುದು.
- ಮಕ್ಕಳ ಹಕ್ಕುಗಳ ಕುರಿತು ಶಾಲಾ ಮಕ್ಕಳಿಗೆ ಶಾಲೆಗಳಲ್ಲಿ 01 ಘಂಟೆಗಳ ಕಾಲ ಭೋದನೆ ಮಾಡುವುದು.
- ಅಂಗಡಿಗಳಿಗೆ ಲೈಸೆನ್ಸ್ ಕೊಡುವ ಮುನ್ನ ಅಂಗಡಿಗಳ ಬೋರ್ಡ್‌ಗಳ ಮೇಲೆ ಮಕ್ಕಳ ಸಹಾಯವಾಣಿ–1098 ಬರೆಸುವುದು ಕಡ್ಡಾಯಗೊಳಿಸಲು ಸ್ಥಳೀಯ ಗ್ರಾಮ ಪಂಚಾಯಿತಿ/ಪುರಸಭೆ/ನಗರಸಭೆ/ಬಿಬಿಎಂಪಿ ಇವರನ್ನು ಕೋರುವುದು.
- ಮೆಟ್ರೋಗಳಲ್ಲಿ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್‌ಗಳ ಮೇಲೆ ಮಕ್ಕಳ ಸಹಾಯವಾಣಿ–1098 ಪ್ರದರ್ಶಿಸಲು ಕ್ರಮ ವಹಿಸುವುದು.

(12)

- ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು ಇತ್ಯಾದಿ ಧಾರ್ಮಿಕ ಸ್ಥಳಗಳಲ್ಲಿ, ಗೋಡೆಗಳ ಮೇಲೆ ಮಕ್ಕಳ ಸಹಾಯವಾಣಿ–1098ನ್ನು ಬರೆಸುವುದು.
- ಸಂಪೂರ್ಣವಾಗಿ BBMP Area ಗಳಲ್ಲಿ Auto Recorder Mike ಮುಖಾಂತರ ಪ್ರಚಾರ ಮಾಡುವುದು.
- ಮಕ್ಕಳ ರಕ್ಷಣೆಗೆ ಸಂಬಂಧಿಸಿದ ವಿಷಯಗಳ ಹೆಚ್ಚಿನ ಪ್ರಚಾರಕ್ಕಾಗಿ ಫೇಸ್‌ಬುಕ್, ಟ್ವೀಟರ್ ಹಾಗೂ ಸೋಷಿಯಲ್ ಮೀಡಿಯಾಗಳ ಮೂಲಕ ಹೆಚ್ಚಿನ ಪ್ರಚಾರ ಮಾಡುವುದು. ಇವುಗಳ ನಿರ್ವಹಣೆಗಾಗಿ ಎಂಸಿಎ ಇವರನ್ನು ದರಪಟ್ಟಿ ಕೇಳುವುದು.
- ಮಕ್ಕಳ ಭಿಕ್ಷಾಟನೆ ವಿರುದ್ಧ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಪ್ಲಕಾರ್ಡ್ ಷೋ, ಬೀದಿ ನಾಟಕಗಳು, ಪೋಸ್ಟರ್, ವಿಡಿಯೋ ಸಿದ್ಧಪಡಿಸುವುದು, ರೇಡಿಯೋ ಜಿಂಗಲ್‌ಗಳನ್ನು ಸಿದ್ಧಪಡಿಸುವುದು.
- ಮಕ್ಕಳ ಭಿಕ್ಷಾಟನೆ ವಿರುದ್ಧ ಮಾಡುವಂತ ಎಲ್ಲಾ ಐಇಸಿ ಕಾರ್ಯಕ್ರಮಗಳಿಗೆ ಐಸಿಪಿಎಸ್‌ನಲ್ಲಿ ಹೆಚ್ಚಿನ ಅನುದಾನ ಲಭ್ಯವಿಲ್ಲದಿರುವ ಕಾರಣದಿಂದ ಹಾಗೂ WP 10096/2020 ಹಿನ್ನೆಲೆಯಲ್ಲಿ Beggary Cess ಯಿಂದ ಅನುದಾನ ಒದಗಿಸಿದರೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಿಂದ ಈ ಐಇಸಿ ಕ್ರಿಯಾ ಯೋಜನೆಯನ್ನು ಮಾಡಲಾಗುವುದೆಂದು ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ (KSLSA)ಗೆ ಪತ್ರ ಬರೆಯಬಹುದು.

ಸಭೆಯಲ್ಲಿ ನೆರೆದಿದ್ದ ಎಲ್ಲರಿಗೂ ಮಾನ್ಯ ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರು ಚರ್ಚಿಸಲಾದ ಎಲ್ಲಾ ವಿಷಯಗಳ ವಿನಿಮಯಕ್ಕಾಗಿ ಧನ್ಯವಾದಗಳನ್ನು ಹೇಳುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

01.01.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು